ನರಸಿಂಹ ಎಂ. ಪೈ, ಕಾಸರಕೋಡ
*ಕಪ್ಪು ಬಿಳುಪು ಕಣ್ಣಿನಲ್ಲಿ ಬಣ್ಣ ಬಣ್ಣದ ಕನಸುಗಳು ಏಕಿವೆ?*



ಸರಿಯಾಗಿಯೇ ಇದೆಯಲ್ಲಾ... ಏಳು ಬಣ್ಣ ಸೇರಿ ಬಿಳಿಯ ಬಣ್ಣ!

ಕಾಳೀಹುಂಡಿ ಶಿವಕುಮಾರ್, ಮೈಸೂರು
*ನಿರಂತರವಾಗಿ ಹೋರಾಟ ನಡೆಸಿದರೂ ಯಶಸ್ಸು ಸಿಗದಾಗ ಏನು ಮಾಡಬೇಕು?*
ಯಶಸ್ವಿ ಮಾವನ ಏಕೈಕ ಮಗಳನ್ನು ಮದುವೆ ಆಗಬೇಕು!

ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ
*ಹಣವನ್ನೇ ನಂಬಿ ಬದುಕುವವರಿಗೆ ನಿಮ್ಮ ಸಲಹೆ ಏನು?*
ತಪ್ಪಿಲ್ಲ, ಆದರೆ ಆರೋಹಣ ಇರಲಿ, ಅವರೋಹಣ ಬೇಡ!

ಜಿ. ಮಂಜುನಾಥ, ಹೆಚ್.ಬಿ.ಹಳ್ಳಿ
*ಅತಿಯಾದ ಪ್ರೇಮ ಮನುಷ್ಯನನ್ನು ಗೌರವಹೀನನಾಗಿಸುತ್ತದೆಯೆ?*
ಒನ್ ವೇ ಲವ್ ಆದರೆ ಮಾತ್ರ!

ಎಚ್.ಆರ್.ದೇಸಾಯಿ, ರಾಯಚೂರು
*ಇಂದು ನಾವು ಇರಲಾರದ್ದನ್ನು ಪಡೆಯಲು ಹೋಗಿ, ಇದ್ದದ್ದೆಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ. ಏನದು?*
ಬುದ್ಧಿ!

ವಿ. ಹಮೀದ್, ವಿಟ್ಲ
*ಸಾಧನೆ ಮಾಡುವ ವ್ಯಕ್ತಿಗೆ ಗುರು ಮುಖ್ಯವೋ, ಗುರಿ ಮುಖ್ಯವೋ?*



ಅವನು ಹೇಳಿದಂತೆ ಕೇಳುವ ಕುರಿ ಮುಖ್ಯ!

ಬಿ.ಎಸ್. ಮಳ್ಳೂರ, ಹಲಗತ್ತಿ
*ಹಳೇ ಹೆಂಡ್ತಿ ಕೊಟ್ಟು ಹೊಸ ಹೆಂಡ್ತಿ ಪಡೆಯುವ ಎಕ್ಸ್ ಚೇಂಜ್ ಆಫರ್ ಜಾರಿಗೆ ಬಂದರೆ?*
ನಿಮ್ಮ ತೀರ್ಥರೂಪರು ಕ್ಯೂನಲ್ಲಿ ನಿಲ್ಲುತ್ತಾರೆ, ನಿಮಗೆ ಆಗಾಗ್ಗೆ ಹೊಸ ಅಮ್ಮ!

ಸರ್ದಾರ್ ಎಂ. ಅರಸೀಕೆರೆ
*ತೆರಿಗೆ ಎಂದರೇನು?*
ಆದಾಯದ ಕರೆಂಟ್‌ನಿಂದ ಖರ್ಚಿನ ಬಲ್ಬ್ ಹತ್ತಿಸಲು ಹೋದಾಗ ಮಧ್ಯದಲ್ಲಿ ಹೊಡೆಯುವ ಷಾಕ್!

ಗು. ರಘುನಂದನ, ಮಂಡ್ಯ
*ನಾಳೆಯ ಬಗ್ಗೆ ನಂಬಿಕೆ ಇಲ್ಲ, ಇಂದಿನ ಬಗ್ಗೆ ವಿಶ್ವಾಸವಿಲ್ಲ, ನೆನ್ನೆಯ ಬಗ್ಗೆ ಖುಷಿ ಇಲ್ಲ. ಹೀಗಾದವರಿಗೆ ಜೀವನ ಹೇಗಿರುತ್ತದೆ?*
ಬಿಎಸ್‌ವೈ ಜೀವನದಂತೆ

ಮಹೇಶ್ ಹೆಗ್ಡೆ, ಹೆಗ್ಲೆ
*ಗಂಡ ಬೈದ್ರೂ ಡೈವೋರ್ಸ್ ಕೊಡೋದು ಸಮಾನತೆಯ ಹಕ್ಕಾ, ಶಿಕ್ಷಣದಿಂದ ದೊರೆತ ಸೊಕ್ಕಾ?*
ರೊಕ್ಕ ಇದ್ರೆ ಪಕ್ಕಾ, ಗಂಡ ಇರಬೇಕ್ಯಾಕ ಎಂಬ ಹುಂಬತನವಷ್ಟೆ!

ಸವಿರವಿ, ಬಾಳೆಹೊನ್ನೂರು
*ಇರುವೆಗಳು ಹತ್ತಿರ ಬಂದಾಗ ಒಂದರ ಮೂತಿ ಹತ್ತಿರ ಇನ್ನೊಂದು ಮೂತಿ ತರುತ್ತದಲ್ಲ, ಅವು ಏನು ಮಾತನಾಡಿಕೊಳ್ಳುತ್ತವೆ?*
ಕುಲಪಾತಕಿ ನೋಡ್ತಿದ್ದಾನೆ, ಓಡ್ಹೋಗಿ ಗೂಡು ಸೇರ್ಕೋ.

ರಾಜಶೇಖರರೆಡ್ಡಿ ಎಸ್.ಜಿ. ಶಿರೇಕೊಳಂ
*ಕ್ಷಮೆ ಇರಲಿ, ನೀವು ತೀರಿಕೊಂಡರೆ ನಿಮ್ಮನ್ನು ಹೂಳಬೇಕಾ, ಸುಡಬೇಕಾ?*
ಕ್ಷಮಿಸಿ, ಎರಡೂ ಸಲ್ಲದು, ನಾನು ದೇಹದಾನ ಮಾಡಿದ್ದೇನೆ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಗ್ರಾಮಗಳಿಂದ ಆರಿಸಿಬಂದ ಅನಕ್ಷರಸ್ಥರು ಇತರರ ಕೈಗೊಂಬೆಗಳಾದಾಗ ಆ ಊರುಗಳ ಅಭಿವೃದ್ಧಿ ಸಾಧ್ಯವೆ?*
ಸಾಧ್ಯ, ಆದರೆ ಸಾಸಿವೆಕಾಳಿನಷ್ಟು ಅಭಿವೃದ್ಧಿಗೆ ಹಿಮಾಲಯದಷ್ಟು ಕೊಳ್ಳೆ!

ಎಂ.ಆರ್. ಕೌಶಿಕ್‌ರಾಜ್, ಹನುಮನಾಳು
*ದೇಶಕ್ಕೆ ಸ್ವಾತಂತ್ರ್ಯ ಬಂದರೂ ಇಲ್ಲೊಬ್ಬ ಮಡದಿಯ ಬಳಿ ಅತಂತ್ರನಾಗಿದ್ದಾನಲ್ಲಾ...?*
ದೇಶದ ಪರಿಸ್ಥಿತಿ ಕಂಡಮೇಲೆ ಸ್ವತಂತ್ರಕ್ಕಿಂತಲೂ ಅತಂತ್ರವೇ ಹಿತ ಎಂದನಂತೆ!

ಎಂ.ಎನ್. ಸೋಮಶೇಖರ್, ಮೈಸೂರು
*ಈಗ ಹಿಂದುಳಿದಿರುವ ವಿಪ್ರರ ಉದ್ಧಾರ ಹೇಗೆ?*
ವಿವೇಕದಿಂದ, ಪ್ರಯತ್ನದಿಂದ!

## ಬಹುಮಾನಿತ ಪ್ರಶ್ನೆ

ಎಂ.ಬಿ. ಖೋದಾನಪೂರ, ಸವದತ್ತಿ
*ಬೆಲೆ ಏರಿಕೆಯ ಈ ದಿನಗಳಲ್ಲಿ ಮಕ್ಕಳನ್ನು ಹೆರುವುದು ಸರಿಯೆ?*
ಹುಚ್ಚಪ್ಪ! ಹೆರದೆ ಒಳಗೇ ಇಟ್ಟುಕೊಳ್ಳಲು ಮಕ್ಕಳೇನು ಕಪ್ಪುಹಣವೇ?

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಹಳಿಯಿಲ್ಲದೆ ರೈಲು ಓಡಿಸುವುದೆಂದರೆ...?*
ಮನೆಯೊಂದು ನೂರು ಬಾಗಿಲು ತರಹದ ಸೀರಿಯಲ್ ತೆಗೆಯುವುದು!

ರಮೇಶ್, ಹನುಮನಾಳು
*ನೂರು ಜನ್ಮಕು, ನೂರಾರು ಜನ್ಮಕು ಎಂದು ಹಾಡುವ ಒಬ್ಬಳು ಈ ಜನ್ಮದಲ್ಲೇ ಕೈಗೆ ಸಿಗುತ್ತಿಲ್ಲ, ಏಕೆ?*
ಕೌಂಟಿಂಗ್ ಶುರು ಆಗೋದೇ ಮುಂದಿನ ಜನ್ಮದಿಂದಂತೆ!

ರವಿಭಟ್, ಬೆಂಗಳೂರು
*ಟೈಗೂ, ಕೌಪೀನಕ್ಕೂ ಇರುವ ವ್ಯತ್ಯಾಸ?*
ಒಂದು ಬಿಗಿ ಆಗಬಾರದು, ಇನ್ನೊಂದು ಸಡಿಲ ಆಗಬಾರದು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಛತ್ರಿಗೂ, ಕತ್ರಿಗೂ ಏನು ವ್ಯತ್ಯಾಸ?*



ಛತ್ರಿ ಮಂತ್ರಿ ಆಗ್ತಾನೆ, ಕತ್ರಿ ಸೆನ್ಸಾರ್ ಬೋರ್ಡ್ ಅಧ್ಯಕ್ಷ!

ಮಹಾವೀರ ಸಾಸರ, ಚನ್ನಗಿರಿ
*ನೀವು ಕಂಪ್ಯೂಟರ್ ಭವಿಷ್ಯ ನಂಬುತ್ತೀರಾ?*
ಕಂಪ್ಯೂಟರ್‌ನ ಭವಿಷ್ಯ ಚೆನ್ನಾಗಿದೆ ಎಂದು ನಂಬುತ್ತೇನೆ!

ನರಸಿಂಹ ಎಂ.
*ನೂರು ಮಹಡಿ ಮನೆಗಿಂತ ನೆಲಮಾಳಿಗೆಯ ಮನೆಯೇ ಚಂದ. ಏಕೆ?*
ಕೂತಕಡೆಯಿಂದಲೇ ಮೋರಿ, ರಸ್ತೆ, ಎದುರು ಮನೆಗಳಿಗೆ ಕಸ ಬಿಸಾಡಲು ಗ್ರೌಂಡ್ ಫ್ಲೋರೇ ಬೆಸ್ಟು!

■ ರಾಮ್